# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 770 |
| ಉತ್ತರಿಸಬೇಕಾದ ದಿನಾಂಕ | : | 21.02.2024 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 'ಪಶುಸಂಜೀವಿನಿ' ಯೋಜನೆಯಡಿ ರಾಸುಗಳ ತುರ್ತು ಚಿಕಿತ್ಸೆಗಾಗಿ ಒದಗಿಸಲಾದ ಆಂಬ್ಯುಲೆನ್ಸ್‌ಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಖರೀದಿಸಲಾದ 15 ಪಶುಸಂಜೀವಿನಿ ವಾಹನಗಳು ಮತ್ತು ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಯೋಜನೆಯಡಿ ಬರುವ ಪಶುವೈದ್ಯಕೀಯ ಆಸ್ಪತ್ರೆಗಳ ಸ್ಥಾಪನೆ ಮತ್ತು ಬಲವರ್ಧನೆಗಳ ಯೋಜನೆಯಡಿ ರಾಜ್ಯದಲ್ಲಿನ ರಾಸುಗಳ ತುರ್ತು ಚಿಕಿತ್ಸೆಗಾಗಿ ಒಟ್ಟು 275 ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳು ಸೇರಿದಂತೆ ಒಟ್ಟಾರೆ 290 ಪಶು ಚಿಕಿತ್ಸಾ ಆಂಬ್ಯುಲೆನ್ಸ್‌ಗಳು ಇರುತ್ತವೆ. |
| ಆ) | ಮಂಜೂರಾದ ಮತ್ತು ಖರೀದಿಸಲಾಗಿರುವ ಆಂಬ್ಯುಲೆನ್ಸ್‌ಗಳ ಪೈಕಿ ಕಾರ್ಯಾಚರಣೆ ಆರಂಭಿಸಿರುವ ಮತ್ತು ಕಾರ್ಯಾಚರಣೆ ಆರಂಭಿಸಿದ್ದ ಆಂಬ್ಯುಲೆನ್ಸ್‌ಗಳ ಸಂಖ್ಯೆ ಎಷ್ಟು; ಕಾರ್ಯಾಚರಣೆ ಆರಂಭಿಸದಿರುವುದಕ್ಕೆ ಕಾರಣಗಳೇನು; (ವಿವರ ನೀಡುವುದು) | ರಾಜ್ಯಾದ್ಯಂತ 275 ಸಂಚಾರಿ ಪಶುಚಿಕಿತ್ಸಾ ವಾಹನಗಳ ಕಾರ್ಯಾಚರಣೆಯನ್ನು ದಿನಾಂಕ:05.08.2023 ಸೇವಾ ಪೂರೈಕೆದಾರರಾದ M/s. Eduspark International Pvt Ltd, Maharashtra ರವರಿಂದ ಪ್ರಾರಂಭ ಮಾಡಲಾಗಿರುತ್ತದೆ.<br><br>ಉಳಿದ 15 ಪಶುಸಂಜೀವಿನಿ ಆಂಬ್ಯುಲೆನ್ಸ್‌ಗಳು ಆಯಾ ಜಿಲ್ಲೆಯ ಪಾಲಿಕ್ಲಿನಿಕ್ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ. |
| ಇ) | ಪಶುಸಂಜೀವಿನಿ ಯೋಜನೆಯಡಿ ಒದಗಿಸಲಾದ ಆಂಬ್ಯುಲೆನ್ಸ್‌ಗಳ ಮೂಲಕ ಸ್ಥಳಕ್ಕೆ ತೆರಳಿ ಚಿಕಿತ್ಸೆ ನೀಡಲಾದ ರಾಸುಗಳ ಸಂಖ್ಯೆ ಎಷ್ಟು; | 'ಪಶುಸಂಜೀವಿನಿ' ಯೋಜನೆಯಡಿ ಒದಗಿಸಲಾದ 290 ಆಂಬ್ಯುಲೆನ್ಸ್‌ಗಳ ಮೂಲಕ ಸ್ಥಳಕ್ಕೆ ತೆರಳಿ 104214 ರಾಸುಗಳಿಗೆ ಚಿಕಿತ್ಸೆ ನೀಡಲಾಗಿರುತ್ತದೆ. ಮಾಹೆವಾರು ಚಿಕಿತ್ಸೆ ನೀಡಲಾದ ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ. |

| ಕ್ರ ಸಂ | ಮಾಹೆ | ಚಿಕಿತ್ಸೆ ನೀಡಲಾದ ರಾಸುಗಳ ಮಾಹೆವಾರು ಸಂಖ್ಯೆ |
|---|---|---|
| 1 | ಆಗಸ್ಟ್ 2023 | 1054 |
| 2 | ಸೆಪ್ಟಂಬರ್ 2023 | 5437 |

..2

<table>
<tr>
<td></td>
<td></td>
<td>
<table>
<tr><td>3</td><td>ಅಕ್ಟೋಬರ್ 2023</td><td>20785</td></tr>
<tr><td>4</td><td>ನವೆಂಬರ್ 2023</td><td>24453</td></tr>
<tr><td>5</td><td>ಡಿಸೆಂಬರ್–2023</td><td>25940</td></tr>
<tr><td>6</td><td>ಜನವರಿ–2024</td><td>26545</td></tr>
<tr><td colspan="2">ಒಟ್ಟು ಚಿಕಿತ್ಸೆ ನೀಡಿದ ಸಂಖ್ಯೆ</td><td>104214</td></tr>
</table>
</td>
</tr>
<tr>
<td>ಈ)</td>
<td>ಆಂಬ್ಯುಲೆನ್ಸ್‌ಗಳಲ್ಲಿ ಯಾವ ತರಹದ ಚಿಕಿತ್ಸಾ ಸೌಲಭ್ಯಗಳಿವೆ; ಪ್ರತಿ ಆಂಬ್ಯುಲೆನ್ಸ್‌ಗಳಲ್ಲಿ ಕರ್ತವ್ಯ ನಿರ್ವಹಿಸುವ ನೌಕರರ ಸಂಖ್ಯೆ ಎಷ್ಟು? ( ವಿವರ ನೀಡುವುದು)</td>
<td>ಪಶು ಚಿಕಿತ್ಸಾ ಆಂಬ್ಯುಲೆನ್ಸ್‌ಗಳಲ್ಲಿ ರಾಸುಗಳಿಗೆ ತುರ್ತು ಪಶುವೈದ್ಯಕೀಯ ಸೇವೆ ನೀಡಲು ಅವಶ್ಯವಿರುವ ಅಗತ್ಯ ಔಷಧಿಗಳು, ಮೈನರ್ ಸರ್ಜರಿ ಉಪಕರಣಗಳು ಒಳಗೊಂಡಂತೆ ಇತರೆ ಪಶು ವೈದ್ಯಕೀಯ ಸೇವೆಗಳಿಗೆ ಅವಶ್ಯಕತೆಯಿರುವ ಉಪಕರಣಗಳನ್ನು ಒಳಗೊಂಡಿದೆ.<br><br>ಪ್ರತೀ ಸಂಚಾರಿ ಪಶುಚಿಕಿತ್ಸಾ ಘಟಕ ವಾಹನದಲ್ಲಿ ಒಬ್ಬ ಪಶುವೈದ್ಯರು, ಒಬ್ಬ ಅರೆ ತಾಂತ್ರಿಕ ಸಿಬ್ಬಂದಿ, ಮತ್ತು ಒಬ್ಬ ಡ್ರೈವರ್ ಕಮ್ ಅಟೆಂಡರ್ ರವರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.</td>
</tr>
</table>

**ಇ–ಪಸಂಮೀ 35 ಸಲೆವಿ 2024**

**(ಕೆ. ವೆಂಕಟೇಶ್)**

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**